# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 541 |
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಎಷ್ಟು ಎಕರೆ ಅರಣ್ಯ ಭೂಮಿಯನ್ನು ಭೋಗ್ಯಕ್ಕೆ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | 1. ಚಾಮರಾಜನಗರ ವೃತ್ತ -599.96 ಎಕರೆ ಅಂದಾಜು<br>2. ಕೊಡಗು ವೃತ್ತ- 6146.37 ಎಕರೆ ಅಂದಾಜು |
| ಆ) | ಭೋಗ್ಯಕ್ಕೆ ಪಡೆದ ವ್ಯಕ್ತಿಗಳು/ ಕಂಪನಿಗಳು ಸರ್ಕಾರಕ್ಕೆ ಪಾವತಿಸಬೇಕಾದ ಬಾಕಿ ಹಣವೆಷ್ಟು; (ಕಂಪನಿವಾರು ಜಿಲ್ಲಾವಾರು ವಿವರ ನೀಡುವುದು) | **ಮಡಿಕೇರಿ ಜಿಲ್ಲೆಯಲ್ಲಿ**<br>1. ಮರ್ಕೇರಾ ರಬ್ಬರ್ ಕಂಪನಿ<br>2. ನೀಲಾಂಬರ್ ರಬ್ಬರ್ ಕಂಪನಿ<br>3. ಥಾಮ್ ಸನ್ ರಬ್ಬರ್ ಕಂಪನಿ<br>4. ಪೋರ್ಟ್ ಲ್ಯಾಂಡ್ ರಬ್ಬರ್ ಕಂಪನಿ<br>5. ಟಾಟಾ ಕಾಫಿ ಲಿಮಿಟೆಡ್<br>6. ಗ್ಲೆನ್ ಲೋರೆನ್ ಪ್ಲಾಂಟೇಷನ್<br>ಕಂಪನಿಗಳಿಂದ ರೂ.1466.79 ಕೋಟಿಗಳು ಸರ್ಕಾರಕ್ಕೆ ಪಾವತಿಸಲು ಬಾಕಿ ಇರುತ್ತದೆ ಎಂದು ಅಂದಾಜಿಸಲಾಗಿರುತ್ತದೆ. |
| ಇ) | ಎಷ್ಟು ಕಂಪನಿ/ವ್ಯಕ್ತಿಗಳಿಗೆ ನೀಡಿದ ಭೂಮಿಯ ಭೋಗ್ಯದ ಅವಧಿ ಮುಗಿದೆ; ಭೋಗ್ಯದ ಅವಧಿ ಮುಗಿದ ಭೂಮಿಯನ್ನು ಹಿಂಪಡೆಯಲು ಸರ್ಕಾರ ಕೈಗೊಂಡ ಕ್ರಮವೇನು; | ಕೊಡಗು ವೃತ್ತದಲ್ಲಿ ಐದು ಕಂಪನಿಗಳಿಗೆ ಹಾಗೂ ಚಾಮರಾಜನಗರ ವೃತ್ತದಲ್ಲಿ ಐದು ಕಂಪನಿಗಳಿಗೆ ಗುತ್ತಿಗೆಯನ್ನು ನೀಡಲಾಗಿರುತ್ತದೆ.<br><br>ಕೊಡಗು ಜಿಲ್ಲೆಯಲ್ಲಿ ರಬ್ಬರ್ ಮತ್ತು ಕಾಫಿ/ಟೀ ಬೆಳೆ ಬೆಳೆಯಲು ಸೆಕ್ರಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಕೌನ್ಸಿಲ್ ರವರು ದಿನಾಂಕ 1910ರಿಂದ 1929ರ ಅವಧಿಯಲ್ಲಿ 999 ವರ್ಷಗಳ ಅವಧಿಗೆ ಗೇಣಿಗೆ ನೀಡಲಾಗಿದೆ.<br><br>1. ಸರ್ಕಾರಿ ಆದೇಶ ಸಂಖ್ಯೆ: 192.ಎಫ್ ಎಲ್.ಎಲ್.2008 ದಿನಾಂಕ 19.12.2012ರಲ್ಲಿ ಗುತ್ತಿಗೆ ಮೂಲ ಅವಧಿಯನ್ನು 999 ವರ್ಷಗಳಿಂದ 99 ವರ್ಷಗಳಿಗೆ ಮಿತಿಗೊಳಿಸಿ ಆದೇಶ ಮಾಡಲಾಗಿರುತ್ತದೆ.<br>2. ಗುತ್ತಿಗೆ ಅವಧಿಯು 2015ನೇ ಸಾಲಿಗೆ ಮುಕ್ತಾಯ ಗೊಂಡಿರುವುದರಿಂದ ಗುತ್ತಿಗೆ ನೀಡಿರುವ ಜಾಗವನ್ನು ಇಲಾಖಾ ವಶಕ್ಕೆ ಪಡೆಯಲು ಸಂಬಂಧಪಟ್ಟ ಕಂಪನಿಯವರಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು ಇವರ ಪತ್ರ ಸಂಖ್ಯೆ:ಎಪಿಸಿಸಿಎಫ್(ಜಾಗೃತ)/ಬ್ರಿಟಿಷ್ ಲೀಸ್/ ಸಿಆರ್-52/2015-16, ದಿನಾಂಕ:21.08.2015ರಂತೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ.<br>3. ಕಂಪನಿಯವರಿಗೆ ಗುತ್ತಿಗೆ ಮೊತ್ತವನ್ನು ಪಾವತಿಸುವ ಕುರಿತು ಕೊಡಗು ವೃತ್ತ ರವರ ಪತ್ರ ಸಂಖ್ಯೆ:ಅ.ಅ.ವಿ/ಬ್ರಿಟಿಷ್ ಲೀಸ್/ಸಿಆರ್-17/2015- |

| | | |
|---|---|---|
| | | 16.ದಿನಾಂಕ:09.11.2015 ರಂತೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ.<br><br>ಅದರಂತೆ ಕ್ರ.ಸಂ.1 ರಿಂದ 3ರ ವರೆಗೆ ನಮೂದಿಸಲಾಗಿರುವ ಅಂಶಗಳ ವಿರುದ್ಧ ಸಂಬಂಧಪಟ್ಟ ಕಂಪನಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿರುತ್ತಾರೆ ಹಾಗೂ ಮಾನ್ಯ ನ್ಯಾಯಾಲಯವು ಈ ಪ್ರಕ್ರಿಯೆಗೆ ತಡೆಯಾಜ್ಞೆ ನೀಡುರುತ್ತದೆ |
| ಈ) | ಖಾಸಗಿ ಕಂಪನಿಯೊಂದು ಭೋಗ್ಯದ ಭೂಮಿಯನ್ನು ಅಡವಿಟ್ಟು ಸಾಲ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಭೋಗ್ಯದಲ್ಲಿರುವ ಸರ್ಕಾರಿ ಭೂಮಿಯನ್ನು ಅಡವಿಟ್ಟು ಸಾಲ ಪಡೆಯಲು ಅವಕಾಶವಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸರ್ಕಾರಿ ಭೂಮಿಯನ್ನು ಅಡವಿಟ್ಟು ಸಾಲ ಪಡೆಯಲು ಅರಣ್ಯ ಕಾಯ್ದೆ ಮತ್ತು ನಿಯಮದಲ್ಲಿ ಅವಕಾಶವಿರುವುದಿಲ್ಲ. |
| ಉ) | ಈ ರೀತಿ ಸರ್ಕಾರಿ ಭೂಮಿಯನ್ನು ಅಡವಿಟ್ಟು, ದುರ್ಬಳಕೆ ಮಾಡಿದ ವ್ಯಕ್ತಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; ಸದರಿ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲು ಕೈಗೊಂಡ ಕ್ರಮಗಳೇನು? | ಅರಣ್ಯ ಜಮೀನುಗಳನ್ನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ/ಗೇಣಿ ವಸೂಲಾತಿ/ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ತ್ವರಿತ ವಿಲೇವಾರಿಗೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಪರಿಶೀಲಿಸಲು ಸರ್ಕಾರದ ಆದೇಶ ಸಂಖ್ಯೆ.ಎಫ್‌ಇಇ 47 ಎಫ್‌ಎಲ್‌ಎಲ್ 2024 ದಿನಾಂಕ 23.01.2024ರಲ್ಲಿ ಕಾರ್ಯಪಡೆಯನ್ನು ರಚಿಸಲಾಗಿರುತ್ತದೆ. |

**ಸಂಖ್ಯೆ: ಎಫ್‌ಇಇ 80 ಎಫ್‌ಎಲ್‌ಎಲ್ 2024**

**(ಈಶ್ವರ ಬಿ ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ
ಸಚಿವರು

ಈಶ್ವರ ಬಿ. ಖಂಡ್ರೆ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು